ಕೊಪ್ಪಳ ಜಿಲ್ಲೆಯಲ್ಲಿ ಮಧ್ಯಮ ಏತ ನೀರಾವರಿ ಯೋಜನೆ.

1645(2029)

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೊಪ್ಪಳ ಜಿಲ್ಲೆಯ ರೈತರ ಬಹುದಿನಗಳ ಬೇಡಿಕೆಯಾದ ಬಟಗೇರಿ, ಬಹದ್ದೂರ ಬಂಡಿ ಹಾಗೂ ಅಳವಂಡಿ (ಸ್ಕೀಮ 1, 2 ಹಾಗೂ 3) ಈ ಮಧ್ಯಮ ಏತ ನೀರಾವರಿ ಯೋಜನೆಗಳು ಸರ್ಕಾರದ ಯಾವ ಹಂತದಲ್ಲಿದೆ.

ಆ. ಈ ಕುರಿತು ಅಂದಾಜು ವೆಚ್ಚ ತಯಾರಿಸಲಾಗಿದೆಯೇ : ಇದನ್ನು ಎಂದಿನಿಂದ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು:

ಇ. ಇದರಿಂದ ಲಭ್ಯವಾಗುವ ನೀರಿನ ಪ್ರಮಾಣವೆಷ್ಟು : (ಕೃಷಿಗೆ) ಹಾಗೂ ನೀರು ಒದಗುವ ಕೃಷಿ ಜಮೀನಿನ ಎಕರೆಗಳೆಷ್ಟು?

ಶ್ರೀ ಎಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ. ಸರ್ಕಾರದ ಪರಿಶೀಲನೆಯಲ್ಲಿದೆ.

ಆ. ರೇಖಾ ಅಂದಾಜು ಪಟ್ಟಿಯನ್ನು ಮಾತ್ರ ತಯಾರಿಸಲಾಗಿದೆ. ಉದ್ದೇಶಿತ ಯೋಜನೆಯ ಬಗ್ಗೆ ಅಂತಿಮ ತೀರ್ಮಾನವನ್ನು ಅದರ ಸವಿವರ ಅಂದಾಜನ್ನು ನೀರಿನ ಲಭ್ಯತೆ, ತಾಂತ್ರಿಕ ಮತ್ತು ಆರ್ಥಿಕ ಶಕ್ಯತೆಯ ದೃಷ್ಟಿಯಿಂದ ಪರಿಶೀಲಿಸಿದ ನಂತರ ತೆಗೆದುಕೊಳ್ಳಲಾಗುವುದು.

ಇ. ರೇಖಾ ಅಂದಾಜಿನ ಪ್ರಕಾರ ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆಯಡಿಯಲ್ಲಿ 0.575 ಟಿ.ಎಂ.ಸಿ. ನೀರನ್ನು ಬಳಸಿಕೊಂಡು 4000 ಎಕರೆ ಜಮೀನಿಗೆ ಹಾಗೂ ಅಲವಂಡಿ -ಬಟಗೇರಿ ಏತ ನೀರಾವರಿ ಆಡಿಯಲ್ಲಿ 2.92 ಟಿ.ಎಂ.ಸಿ. ನೀರನ್ನು ಬಳಸಿಕೊಂಡು 20,000 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ.

ಕೊಪ್ಪಳ ಜಿಲ್ಲೆಯ ಸಿಂಗಟಾಲೂರು ಏತ ನೀರಾವರಿ ಕಾಮಗಾರಿ.

1646(2033)

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ಸಿಂಗಟಾಲೂರು ಏತ ನೀರಾವರಿ ಯೋಜನೆಯನ್ನು 2001-2002 ಆಯವ್ಯಯದಲ್ಲಿ ಪೂರ್ಣಗೊಳಿಸಲಾಗುವುದೆಂದು ತಿಳಿಸಿದ್ದು, ಈಗ ಯಾವ ಹಂತದಲ್ಲಿದೆ? ಈಗಾಗಲೇ ಆಗಿರುವ ಹಾಗೂ ಮುಂದೆ ಆಗಬೇಕಾದ ಕಾರ್ಯಗಳ ವಿವರ ನೀಡುವುದು.

ಆ) ಸದರಿ ಯೋಜನೆಗೆ ಪರಿಷ್ಕೃತ ಅಂದಾಜಿಗೆ ಒದಗಿಸಲಾಗುವ ಹೆಚ್ಚಿನ ಹಣವೆಷ್ಟು?

ಇ) ಈ ಯೋಜನೆಯಿಂದ ಎಷ್ಟು ಎಕರೆ ಜಮೀನಿಗೆ ಕೃಷಿಗಾಗಿ ನೀರು ಒದಗಿಸಲಾಗುವುದು. ಅದರಲ್ಲಿ ಕೊಪ್ಪಳ ಜಿಲ್ಲೆಯ ಎಕರೆಗಳಿಗೆಷ್ಟು?

ಈ) ಈ ಯೋಜನೆಯಿಂದ ತುಂಗಭದ್ರಾ ಎಡದಂಡೆ ಹಾಗೂ ಬಲದಂಡೆ ಕಾಲುವೆಗಳ ಅಚ್ಚುಕಟ್ಟು ಪ್ರದೇಶಕ್ಕೆ ನೀರಿನ ತೊಂದರೆ ಉದ್ಭವಿಸುವುದಿಲ್ಲವೇ

ಶ್ರೀ ಎಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಸಿಂಗಟಲೂರು ಏತ ನೀರಾವರಿ ಯೋಜನೆಯ ಸಮಗ್ರವಾಗಿ ಪರಿಷ್ಕರಿಸಲಾದ ರೂ.595.00 ಕೋಟಿಗಳ ಅಂದಾಜಿಗೆ ಸರ್ಕಾರವು, ದಿನಾಂಕ:29-12-2000 ರಂದು ಆಡಳಿತಾತ್ಮಕ ಅನುಮೋದನೆ ನೀಡಿದೆ. ಈಗ ಬ್ಯಾರೇಜಿನ ಕಾಮಗಾರಿ ಮತ್ತು 10 ಕಿಮೀ. ಉದ್ದದ ಬಲದಂಡೆ ಕಾಲುವೆಗಳ ಕಾಮಗಾರಿಗಳು ಭಾಗಶಃ ಮುಗಿದಿದ್ದು, ಎಡದಂಡೆ ಕಾಲುವೆಗಳ ಸರ್ವೆ ಮತ್ತು ವಿನ್ಯಾಸದ ಕಾರ್ಯ ಈಗ ಪ್ರಗತಿಯಲ್ಲಿದೆ. ಬ್ಯಾರೇಜಿನ ಮತ್ತು ಕಾಲುವೆಗಳ ಉಳಿಕೆ ಕೆಲಸ ಇನ್ನು ಆಗಬೇಕಾಗಿದೆ.

ಈ ಯೋಜನೆಗೆ, 2001-02ನೇ ಸಾಲಿನ ಆಯವ್ಯಯದಲ್ಲಿ ರೂ.35.00 ಕೋಟಿಗಳಷ್ಟು ಹಣ ಒದಗಿಸಲಾಗಿದೆ, ಹಾಗೂ ಪರಿಷ್ಕೃತ ಕಾರ್ಯಕ್ರಮದಂತೆ ಸದರಿ ಯೋಜನೆಯನ್ನು ಡಿಸೆಂಬರ್ 2003ರ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಆ) 2001-02ನೇ ಸಾಲಿನ ದರಗಳಂತೆ, ಈ ಮೊದಲು ತಯಾರಿಸಲಾದ ಅಂದಾಜಿನ ಮೊತ್ತವು, ರೂ.290.00 ಕೋಟಿಗಳಾಗಿರುತ್ತದೆ. ಈಗ ಪರಿಷ್ಕರಿಸಲಾಗಿರುವ ಯೋಜನೆಯ ಅಂದಾಜು ಮೊತ್ತ ರೂ.595.00 ಕೋಟಿಗಳಾಗಿದ್ದು, ಇದರಂತೆ ಪರಿಷ್ಕೃತ ಅಂದಾಜಿನಲ್ಲಿ ರೂ.305.00 ಕೋಟಿ ಹೆಚ್ಚಿನ

ಹಣ ಒದಗಿಸಿದಂತಾಗುತ್ತದೆ.

ಇ) ಈ ಯೋಜನೆಯಿಂದ 1,67,000 ಎಕರೆ ಬೆಳೆ ಪ್ರದೇಶಕ್ಕೆ ನೀರಾವರಿ ಒದಗಿಸಲು ಯೋಜಿಸಲಾಗಿದೆ. ಅದರಲ್ಲಿ ಕೊಪ್ಪಳ ಜಿಲ್ಲೆಯ 11,500 ಎಕರೆ ಬೆಳೆ ಪ್ರದೇಶ ಸೇರಿರುತ್ತದೆ. ಈ ನೀರಾವರಿ ಪ್ರದೇಶ ಚಚ್ಚಿಸುವುದರ ಸಾಧ್ಯತೆಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಇಲ್ಲ.

ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಉಚ್ಚ ನ್ಯಾಯಾಲಯ ಪೀಠ ಸ್ಥಾಪನೆ.

1647(2193)

ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ(ರಾಣಿಬೆನ್ನೂರು): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ನಗರಗಳಲ್ಲಿ ಉಚ್ಚ ನ್ಯಾಯಾಲಯದ ಪೀಠ ಸ್ಥಾಪನೆಗೆ ಮುಖ್ಯ ನ್ಯಾಯಾಧೀಶರ ಒಪ್ಪಿಗೆ ಪಡೆಯಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಆ) ಈ ದಿಸೆಯಲ್ಲಿ ನ್ಯಾಯಾಲಯ ಪೀಠ ಸ್ಥಾಪನೆಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಗಳು):

ಅ) ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಉಚ್ಚ ನ್ಯಾಯಾಲಯದ ಪೀಠ ಸ್ಥಾಪಿಸುವ ಕುರಿತಾದ ವಿಷಯವನ್ನು ಮರುಪರಿಶೀಲಿಸಿ ತಮ್ಮ ಶಿಫಾರಸ್ಸು ಒಳಗೊಂಡ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಿ, ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ: 30-4-2001 ರಂದು, ಕರ್ನಾಟಕ ಉಚ್ಚ ನ್ಯಾಯಾಲಯದ ಮಾನ್ಯ ಮುಖ್ಯ ನಾಯಾಧೀಶರಿಗೆ ಪತ್ರ ಬರೆದಿರುತ್ತಾರೆ.

ಆ) ಈ ಬಗ್ಗೆ ಉಚ್ಚ ನ್ಯಾಯಾಲಯದ ಮಾನ್ಯ ಮುಖ್ಯ ನ್ಯಾಯಾಧೀಶರಿಂದ ಶಿಫಾರಸ್ಸನ್ನು ನಿರೀಕ್ಷಿಸಲಾಗುತ್ತಿದೆ.